ಓಎಸ್. 91/2021
ಪಿಡಬ್ಲ್ಯೂ-1

ದಿನಾಂಕ 10.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- ಶ್ರೀ ಸಿ.ಕೆ.ಪಿ ವಕೀಲರಿಂದಃ-</u>

ಹರಿಹರ ಮುಕ್ಕಾಟೀರ ಕುಟುಂಬದವರಿಗೆ ನಾಲ್ಕೇರಿ ಗ್ರಾಮದ ಬಣ್ಣನಮೊಟ್ಟೆ ಮತ್ತು ಚೆನ್ನಂಗೊಲ್ಲಿ ಗ್ರಾಮದಲ್ಲಿ ಪಿತ್ರಾರ್ಜಿತ ಸ್ವತ್ತುಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಹರಿಹರ ಮುಕ್ಕಾಟೀರ ಕುಟುಂಬದಲ್ಲಿ ಆರು ಕುಳಗಳು ಇದ್ದು, ನಾವು ಖಾತಾ ನಂಬರ್ 11 ರ ಸ್ವತ್ತುಗಳಿಗೆ ಸಂಬಂಧಿಸಿದವರು. ಬೇರೆ ಕುಳಗಳ ಖಾತಾ ನಂಬರ್‌ಗಳು ನನಗೆ ಗೊತ್ತಿಲ್ಲ. ಆರು ಕುಳಗಳಲ್ಲಿನ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಿಭಾಗವಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಮೃತ ಮುಕ್ಕಾಟೀರ ಕರುಂಬಯ್ಯರವರ ಮಗ ಸುಬ್ರಹ್ಮಣಿರವರು ಯಾವ ಕುಳಕ್ಕೆ ಸೇರಿದವರು ಎಂಬುದು ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿ ನಮ್ಮ ಕುಟುಂಬಕ್ಕೆ ಸೇರಿದವರಲ್ಲ. ಅವರು ದಾವಾ ಬಿ ಅನುಸೂಚಿ ಸ್ವತ್ತನ್ನು ನಿ.ಪಿ 19 ರ ಕ್ರಯಪತ್ರದ ಅಡಿ ಖರೀದಿಸಿರುತ್ತಾರೆ. ನಮ್ಮ ಕುಟುಂಬದ ಸದಸ್ಯರು ಈಗಾಗಲೇ ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದು, ಸದರಿ ವಿಭಾಗದ ಪ್ರಕಾರ ದಾವಾ ಬಿ ಅನುಸೂಚಿ ಸ್ವತ್ತನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u>- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.

ಓಎಸ್. 91/2021
ಪಿಡಬ್ಲ್ಯೂ-1